# ರವಿ ಬೆಳಗೆರೆ



ಚಿತ್ರ: ಡಿ.ಸಿ. ನಾಗೇಶ್

ಪತ್ರಕರ್ತ, ಅನುವಾದಕ, ಕತೆಗಾರ, ಕಾದಂಬರಿಕಾರ ರವಿ ಬೆಳಗೆರೆ 'ಮಹಾಸ್ವಪ್ನ' ಎಂಬ ಕಥಾನಾಮದಲ್ಲಿ 'ಮಯೂರ'ಕ್ಕೆ ಬರೆದ ಕತೆ 'ಮಿನಾರುಗಳ ಊರಿನಲ್ಲಿ ಅವರು'. ಭಾವಗೀತಾತ್ಮಕ ಹಾಗೂ ಆರ್ದ್ರ ಶೈಲಿಯ ಈ ಕತೆ ಅವರು ಬರೆದ ಕೆಲವೇ ಕತೆಗಳಲ್ಲಿ ಒಂದು. ಅವರ ಕತೆಗಳು ಕನ್ನಡಕ್ಕೆ ಹೊಸದೆನ್ನುವಂತೆ, ಬೇರೆಯದೇ ನುಡಿಗಟ್ಟಿನಲ್ಲಿ, ವಿಶಿಷ್ಟವೆನ್ನುವಂತೆ ಇವೆ. ಬದುಕಿನ ವ್ಯಂಗ್ಯವನ್ನು, ವಾಸ್ತವಕ್ಕೆ ಇರುವ ಮಾಂತ್ರಿಕತೆಯನ್ನು ಅವರ ಕತೆಗಳಲ್ಲಿ ಕಾಣಬಹುದು.

ಅವರ ಎಲ್ಲ ಕತೆಗಳು 'ಒಟ್ಟಾರೆ ಕತೆಗಳು' ಎಂಬ ಸಂಗ್ರಹದಲ್ಲಿ ಸೇರಿವೆ. ಜೀವನ ಚಿತ್ರ, ಅಪರಾಧ, ಸಿನಿಮಾ, ಇತಿಹಾಸ, ಜೀವನ ಶೈಲಿ ಹೀಗೆ ಹತ್ತಾರು ವಿಷಯಗಳ ಕುರಿತಂತೆ ಸುಮಾರು 70ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ.

ಆಸ್ಪತ್ರೆಗೆ ಹೋಗೆಂದು ಸಲಹೆ ಕೊಟ್ಟ. ಆಸ್ಪತ್ರೆಯ ಹಿಂದೆ ಹೆಣದ ಖೋಲಿಯಿದೆ. ನನಗೆ ಭಯ ಅಂದೆ. ಹೆರಿಗೆ ಕೋಣೆಯಲ್ಲಿ ತೊಟ್ಟಿಲುಗಳಿವೆ ಹೋಗು ಅಂದ. ಮಕ್ಕಳ ವಾಸನೆಗೆ, ರಕ್ತದ ವಾಸನೆಗೆ ತೋಳದಂತಹ ನಾಯಿಗಳು ಕೋಣೆಯ ಬಾಗಿಲಿಗೆ ಬರುತ್ತವೆ. ನಾ ಒಲ್ಲೆ ಅಂದೆ. ನಿನ್ನದು ಈಗಷ್ಟೇ ತುಂಬಿದ ಬಸಿರು. ರಕ್ತ ಚೆಲ್ಲೋಕೆ ದೂರವಿದೆ, ಹೋಗು. ಅಂದಹಾಗೇ... ಇವಳೇ... ನಿನ್ನ ಬಸಿರಿಗೆಷ್ಟು ತಿಂಗಳೇ? ಅಂದ. ಮೂರು ಅಂದೆ. ನಾನು ಮುಟ್ಟಿ ಆರು ತಿಂಗಳಾಯಿತು ಅಂದ. ಹುಳ್ಳಂತೆ ನಕ್ಕೆ. ಬಸಿರಲ್ಲ, ಹೊಟ್ಟೆನೋವು ಅಂದೆ. ಕಳೆದ ವಾರವಷ್ಟೇ ಅಲ್ಲವಾ ನೀರಾಗಿದ್ದು... ಪೆದ್ದಾ!... ಆಸ್ಪತ್ರೆ ಬೇಡ, ಅಮ್ಮನ ಮನೆಗೆ ಹೋಗ್ತೇನೆ ಬಿಡು. ಒಂದೇ ಒಂದು ಸಲ ನನ್ನ ಕೈ ಬಿಡು. ನಾನು ಮಗಳಾಗಬೇಕು. ಹೀಗೆ ನಿನ್ನ ಹೆಂಡತಿಯಾಗಿ, ಮಕ್ಕಳಿಗೆ ಅಮ್ಮನಾಗಿ, ನಿಮ್ಮಮ್ಮನಿಗೆ ಸೊಸೆಯಾಗಿ... ಆಗಿ ಆಗಿ ಆಗಿ ಸಾಕಾಗಿದೆ. ಒಂದೇ ಒಂದು ಸಲ ನಮ್ಮಮ್ಮನಿಗೆ ಮಗಳಾಗಿ ಬಂದುಬಿಡುತ್ತೇನೆ. ನಿನ್ನ ಕಣ್ಣ ಜೈಲಿನಿಂದ ನಂಗೋಸ್ಕರ ಒಂದು ದಿನದ ಬಿಡುಗಡೆಕೊಡು ಅಂತ ಗೋಗರೆದೆ. ಸುಮ್ಮನಿದ್ದ. ರಾತ್ರಿ ತುಂಬ ಹೊತ್ತು ನನ್ನನ್ನೇ ನೋಡುತ್ತ ಕೂತಿದ್ದು ಆಮೇಲೆ ನಿದ್ದೆ ಹೋದ. ನಾನು ಪ್ರಹರಿಯ ಗೋಡೆ ಧುಮುಕಿ ಬಂದುಬಿಟ್ಟೆ. ನಂಗೊತ್ತು. ಆಗಲೂ ಅವನು ನೋಡುತ್ತಲೇ ಇದ್ದ. ಗೋಡೆಯಾಚೆ ನೀನಿದ್ದೆ. ಇಬ್ಬರೂ ಓಡಿ ಓಡಿ ಓಡಿ ಇಲ್ಲಿಗೆ ಬಂದೆವಲ್ಲ... ಮಿನಾರುಗಳ ಊರಿಗೆ?' ಅವಳು ಮಾತು ಮುಗಿಸಿದಾಗ ಕಣ್ಣಂಚಿನಲ್ಲಿ ಸುಳಿತಿರುಗಿದ ನೀರಿನಲ್ಲಿದ್ದುದು ದುಃಖವೋ, ಸಂತೋಷವೋ, ಉನ್ಮಾದವೋ ಅರ್ಥವಾಗದೆ ಆ ಶಿಥಿಲಗೊಂಡ ಮಹಲು ಮತ್ತಷ್ಟು ಮೌನ ಧರಿಸಿತು.

ಅವನಿಗೆ ನಗುಬಂತು. ಹುಡುಗಿಯರನ್ನು ಓಡಿಸಿಕೊಂಡು ಬರುವ ವಯಸ್ಸೇ ತನ್ನದು? ಮೂವತ್ತೈದು ವರ್ಷ ಎಂಬುದು ತಾರುಣ್ಯವೂ ಅಲ್ಲ, ಮುಪ್ಪೂ ಅಲ್ಲ, ಬಾಲ್ಯದ ನೆನಪು, ಮುಪ್ಪಿನ ಭಯಗಳ ಮಧ್ಯೆ